# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.387/2013

**PW**:4

**ದಿನಾಂಕ 04.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 3 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.ಎಸ್.ಕೆ.ಟಿ. ವಕೀಲರಿಂದ:**

1 ನೇ ವಾದಿಯ ಮನೆತನಕ್ಕೆ ಭತಗುಣಕಿ, ನಂಧ್ರಾಳ ಹಾಗೂ ಹಲಸಂಗಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ ಎಂದರೆ ಸರಿ. ನಂಧ್ರಾಳ ಗ್ರಾಮದಲ್ಲಿ ಸರ್ವೆ ನಂ.93 ಇದು 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ನಾನು ಸಾಗುವಳಿ ಮಾಡಿರುತ್ತೇನೆ. ಸರ್ವೆ ನಂ.93 ಇದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಮೃತ 4 ನೇ ಪ್ರತಿವಾದಿಯ ಮಾತು ಕೇಳಿ ಸರ್ವೆ ನಂ.93 ರಲ್ಲಿ ಸಾಗುವಳಿ ಮಾಡುತ್ತಿದ್ದೇನು ಎಂದರೆ ಸರಿಯಲ್ಲ. ನಾನು ಸದರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದ ಕಾರಣ 1 ನೇ ಪ್ರತಿವಾದಿಯು ನನ್ನ ಮೇಲೆ ಝಳಕಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದೂರನ್ನು ದಾಖಲಿಸಿದ ನಂತರ ನನಗೂ ಮತ್ತು 1 ನೇ ಪ್ರತಿವಾದಿಗೆ ಮನಸಾ ಮನಸಾ ಸರಿ ಇಲ್ಲ ಎಂದರೆ ಸರಿಯಲ್ಲ. ಸದರಿ ದೂರನ್ನು ದಾಖಲಿಸಿದ ನಂತರ ನಾನು ಮತ್ತು ಮೃತ 4 ನೇ ಪ್ರತಿವಾದಿಯು ಸದರಿ ಜಮೀನನ್ನು 1 ನೇ ಪ್ರತಿವಾದಿಗೆ ಸಾಗುವಳಿ ಮಾಡಲು ಬಿಟ್ಟುಕೊಟ್ಟಿದ್ದೇವು ಎಂದರೆ ಸರಿ. ಮೃತ 1 ನೇ ವಾದಿಯ ತಂದೆಯ ಹೆಸರು ಮಲ್ಲಪ್ಪ ಮನವಿ ಇರುತ್ತದೆ. ಸದರಿ ಮಲ್ಲಪ್ಪ ಮನವಿ ಇವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಮೃತ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಇವರು ವಾಟ್ನಿ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು. ನಾನು ವಾಟ್ನಿಗೆ ಸಂಬಂಧಿಸಿದಂತೆ ಆಗಿರುವ ಡ ವನ್ನು ನೋಡಿರುತ್ತೇನೆ. ಮೃತ 1 ನೇ ವಾದಿ, 1 ನೇ ಪ್ರತಿವಾದಿ ಹಾಗೂ ಅವರ ಅಣ್ಣ ತಮ್ಮಂದಿರರಿಗೆ ಸುಮಾರು 100 ಎಕರೆ ಜಮೀನು ಇರುತ್ತದೆ ಎಂದರೆ ಸರಿ.

ಮೃತ 1 ನೇ ವಾದಿಯು ಆಸ್ತಿ ಬೇಕು ಎಂದು ದಾವೆ ಮಾಡಿರುತ್ತಾರೆ. ಈ ದಾವೆಯನ್ನು ಸರ್ವೆ ನಂ.145 ಕ್ಕೆ ಸಂಬಂಧಿಸಿದಂತೆ ಮಾಡಿರುತ್ತಾರೆ. 1 ನೇ ವಾದಿಯ ಮನೆತನಕ್ಕೆ ದಾವಾ ಆಸ್ತಿಯನ್ನು ಬಿಟ್ಟು ಸರ್ವೆ ನಂ.350, 363/ಅ, 9/1, 119, 186, 7, 138 ಮತ್ತು 145 ಇರುತ್ತವೆ ಎಂದರೆ ಸರಿ. ಮಲ್ಲಪ್ಪ, ಮಳಸಿದ್ದಪ್ಪ, ಸಿಧ್ರಾಮಪ್ಪ, ರಾಮಗೊಂಡಪ್ಪ, ಬಸಪ್ಪ ಮತ್ತು ಧರೇಪ್ಪ ಇವರು 1954 ನೇ ಇಸವಿಯಲ್ಲಿ ವಾಟ್ನಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1954 ರ ವಾಟ್ನಿಯಲ್ಲಿ ದಾವಾ ಆಸ್ತಿ, ಸರ್ವೆ ನಂ.140 ಇದು 18 ಎಕರೆ 12 ಗುಂಟೆ ಮತ್ತು ಸರ್ವೆ ನಂ.8

ಇದು ವಿಸ್ತೀರ್ಣ 8 ಎಕರೆ 21 ಗುಂಟೆ 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1954 ರ ವಾಟ್ನಿಯಲ್ಲಿ ಮೃತ 1 ನೇ ವಾದಿಯ ಪಾಲಿಗೆ ಸರ್ವೆ ನಂ.139 ವಿಸ್ತೀರ್ಣ 23 ಎಕರೆ 9 ಗುಂಟೆ, ಸರ್ವೆ ನಂ.138 ವಿಸ್ತೀರ್ಣ 20 ಎಕರೆ 10 ಗುಂಟೆ, ಸರ್ವೆ ನಂ.186 ಇದು 20 ಎಕರೆ 06 ಗುಂಟೆ ಮತ್ತು ಸರ್ವೆ ನಂ.7 ಇದು 8 ಎಕರೆ 38 ಗುಂಟೆ ಬಂದಿರುತ್ತದೆ ಎಂದರೆ ಸರಿ. ಮೃತ 1 ನೇ ವಾದಿಯು ದಾವಾ ದಾಖಲಿಸುವ 60 ವರ್ಷಗಳ ಹಿಂದೆಯೇ 1954 ರಲ್ಲಿ ವಾಟ್ನಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. Land selling ಕಾಯಿದೆ ಜಾರಿಗೆ ಬಂದ ಕಾರಣ ಸದರಿ ದಾವಾ ಆಸ್ತಿಯು ಸರ್ಕಾರಕ್ಕೆ ಹೋಗುತ್ತದೆ ಎನ್ನುವ ಕಾರಣದಿಂದ 1972 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯು ತನ್ನ ತಂಗಿ ಪಾರ್ವತಿ ಇವರಿಗೆ ಹಕ್ಕು ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 2007 ನೇ ಇಸವಿಯಲ್ಲಿ 1 ನೇ ಪ್ರತಿವಾದಿಗೆ ಪಾರ್ವತಿ ಇವರು ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2008 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯು ತನ್ನ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ತಲಾ 9 ಎಕರೆ 17 ಗುಂಟೆಯಂತೆ ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

1954 ನೇ ಇಸವಿಯಿಂದ ಮೃತ 1 ನೇ ವಾದಿ ಅವರು ತಮ್ಮ ಪಾಲಿಗೆ ಬಂದ ಜಮೀನವನ್ನು ಹಾಗೂ 1 ನೇ ಪ್ರತಿವಾದಿಯು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಇವತ್ತಿನವರೆಗೂ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಎಲ್ಲರೂ ಕೂಡಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ 1 ನೇ ವಾದಿ ಸಹ Land Selling ಕಾಯಿದೆ ಪ್ರಕಾರ ಆಸ್ತಿ ಸರ್ಕಾರಕ್ಕೆ ಹೋಗುತ್ತದೆ ಎಂದು ಸರ್ವೆ ನಂ.338/3 ಇದು ವಿಸ್ತೀರ್ಣ 10 ಎಕರೆ ಆಸ್ತಿಯನ್ನು ತನ್ನ ತಂಗಿ ಪಾರ್ವತಿಗೆ ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ 10 ಎಕರೆ ಆಸ್ತಿಯಲ್ಲಿ 6 ಎಕರೆ ಆಸ್ತಿಯನ್ನು ಪಾರ್ವತಿ ಮತ್ತು ಮೃತ 1 ನೇ ವಾದಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಸರ್ವೆ ನಂ.338/3 ರ ವಿಸ್ತೀರ್ಣ 4 ಎಕರೆ 5 ಗುಂಟೆ ಇವತ್ತಿನವರೆಗೂ ಪಾರ್ವತಿ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ಮೃತ 1 ನೇ ವಾದಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ನಾನು ವಾದಿ ನಂ.1(ಬಿ) ರವರ ಮಾತು ಕೇಳಿ 1 ನೇ ಪ್ರತಿವಾದಿಗೆ ನಷ್ಟ ಮಾಡಬೇಕೆನ್ನುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.



**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.387/2013

**PW**:3

**ದಿನಾಂಕ 04.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 3 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.ಎಸ್.ಕೆ.ಟಿ. ವಕೀಲರಿಂದ:**

ನಾನು PUC ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು BSF ನಲ್ಲಿ ಸೈನಿಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು 1989 ನೇ ಇಸವಿಯಲ್ಲಿ ಸೈನಿಕ ಸೇವೆಗೆ ಸೇರಿ 2010 ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದಿದ ನಂತರ ನಮ್ಮ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ವಿಜಯಪುರದಲ್ಲಿ ಮನೆ ಮಾಡಿರುತ್ತೇನೆ ಎಂದರೆ ಸರಿ. ನನಗೆ ಹಲಸಂಗಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ. ಸದರಿ ಜಮೀನುಗಳನ್ನು ನಾನೇ ನೋಡಿಕೊಳ್ಳುತ್ತೇನೆ. ಮೃತ 1 ನೇ ವಾದಿಯ ತಂದೆಯ ಹೆಸರು ಮಲ್ಲಪ್ಪ ಮನವಿ ಇರುತ್ತದೆ. ಸದರಿ ಮಲ್ಲಪ್ಪ ಮನವಿ ಇವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಮೃತ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಇವರು ವಾಟ್ನಿ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತು. ನಾನು ವಾಟ್ನಿಗೆ ಸಂಬಂಧಿಸಿದಂತೆ ಆಗಿರುವ ಡ ವನ್ನು ನೋಡಿರುತ್ತೇನೆ. 1 ನೇ ವಾದಿಯ ಮನೆತನಕ್ಕೆ ಭತಗುಣಕಿ, ನಂಧ್ರಾಳ ಹಾಗೂ ಹಲಸಂಗಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ ಎಂದರೆ ಹಲಸಂಗಿ ಗ್ರಾಮದಲ್ಲಿ ಮಾತ್ರ ಇರುತ್ತವೆ ಎಂದು ನುಡಿಯುತಾರೆ. ಮೃತ 1 ನೇ ವಾದಿ, 1 ನೇ ಪ್ರತಿವಾದಿ ಹಾಗೂ ಅವರ ಅಣ್ಣ ತಮ್ಮಂದಿರರಿಗೆ ಸುಮಾರು 100 ಎಕರೆ ಜಮೀನು ಇರುತ್ತದೆ ಎಂದರೆ ಸರಿ.

ಮೃತ 1 ನೇ ವಾದಿಯು ಆಸ್ತಿ ಬೇಕು ಎಂದು ದಾವೆ ಮಾಡಿರುತ್ತಾರೆ. ಈ ದಾವೆಯನ್ನು ಸರ್ವೆ ನಂ.145 ಕ್ಕೆ ಸಂಬಂಧಿಸಿದಂತೆ ಮಾಡಿರುತ್ತಾರೆ. 1 ನೇ ವಾದಿಯ ಮನೆತನಕ್ಕೆ ದಾವಾ ಆಸ್ತಿಯನ್ನು ಬಿಟ್ಟು ಸರ್ವೆ ನಂ.350, 363/ಅ, 9/1, 119, 186, 7, 138 ಮತ್ತು 145 ಇರುತ್ತವೆ ಎಂದರೆ ಸರಿ. ಮಲ್ಲಪ್ಪ, ಮಳಸಿದ್ದಪ್ಪ, ಸಿದ್ರಾಮಪ್ಪ, ರಾಮಗೊಂಡಪ್ಪ, ಬಸಪ್ಪ ಮತ್ತು ಧರೇಪ್ಪ ಇವರು 1954 ನೇ ಇಸವಿಯಲ್ಲಿ ವಾಟ್ನಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1954 ರ ವಾಟ್ನಿಯಲ್ಲಿ ದಾವಾ ಆಸ್ತಿ, ಸರ್ವೆ ನಂ.140 ಇದು 18 ಎಕರೆ 12 ಗುಂಟೆ ಮತ್ತು ಸರ್ವೆ ನಂ.8 ಇದು ವಿಸ್ತೀರ್ಣ 8 ಎಕರೆ 21 ಗುಂಟೆ 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1954 ರ ವಾಟ್ನಿಯಲ್ಲಿ ಮೃತ 1 ನೇ ವಾದಿಯ ಪಾಲಿಗೆ ಸರ್ವೆ ನಂ.139 ವಿಸ್ತೀರ್ಣ 23 ಎಕರೆ 9 ಗುಂಟೆ, ಸರ್ವೆ ನಂ.138 ವಿಸ್ತೀರ್ಣ 20 ಎಕರೆ 10 ಗುಂಟೆ, ಸರ್ವೆ ನಂ.186 ಇದು 20 ಎಕರೆ 06 ಗುಂಟೆ ಮತ್ತು ಸರ್ವೆ ನಂ.7 ಇದು 8 ಎಕರೆ 38 ಗುಂಟೆ ಬಂದಿರುತ್ತದೆ ಎಂದರೆ ಸರಿ.

ಮೃತ 1 ನೇ ವಾದಿಯು ದಾವಾ ದಾಖಲಿಸುವ 60 ವರ್ಷಗಳ ಹಿಂದೆಯೇ 1954 ರಲ್ಲಿ ವಾಟ್ನಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. Land selling ಕಾಯಿದೆ ಜಾರಿಗೆ ಬಂದ ಕಾರಣ ಸದರಿ ದಾವಾ ಆಸ್ತಿಯು ಸರ್ಕಾರಕ್ಕೆ ಹೋಗುತ್ತದೆ ಎನ್ನುವ ಕಾರಣದಿಂದ 1972 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯು ತನ್ನ ತಂಗಿ ಪಾರ್ವತಿ ಇವರಿಗೆ ಹಕ್ಕು ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 2007 ನೇ ಇಸವಿಯಲ್ಲಿ 1 ನೇ ಪ್ರತಿವಾದಿಗೆ ಪಾರ್ವತಿ ಇವರು ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2008 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯು ತನ್ನ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ತಲಾ 9 ಎಕರೆ 17 ಗುಂಟೆಯಂತೆ ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

1954 ನೇ ಇಸವಿಯಿಂದ ಮೃತ 1 ನೇ ವಾದಿ ಅವರು ತಮ್ಮ ಪಾಲಿಗೆ ಬಂದ ಜಮೀನವನ್ನು ಹಾಗೂ 1 ನೇ ಪ್ರತಿವಾದಿಯು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಇವತ್ತಿನವರೆಗೂ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಎಲ್ಲರೂ ಕೂಡಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ 1 ನೇ ವಾದಿ ಸಹ Land Selling ಕಾಯಿದೆ ಪ್ರಕಾರ ಆಸ್ತಿ ಸರ್ಕಾರಕ್ಕೆ ಹೋಗುತ್ತದೆ ಎಂದು ಸರ್ವೆ ನಂ.338/3 ಇದು ವಿಸ್ತೀರ್ಣ 10 ಎಕರೆ ಆಸ್ತಿಯನ್ನು ತನ್ನ ತಂಗಿ ಪಾರ್ವತಿಗೆ ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ 10 ಎಕರೆ ಆಸ್ತಿಯಲ್ಲಿ 6 ಎಕರೆ ಆಸ್ತಿಯನ್ನು ಪಾರ್ವತಿ ಮತ್ತು ಮೃತ 1 ನೇ ವಾದಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಸರ್ವೆ ನಂ.338/3 ರ ವಿಸ್ತೀರ್ಣ 4 ಎಕರೆ 5 ಗುಂಟೆ ಇವತ್ತಿನವರೆಗೂ ಪಾರ್ವತಿ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ಮೃತ 1 ನೇ ವಾದಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ನಾನು ಮತ್ತು ವಾದಿ ನಂ.1(ಬಿ) ರವರು ಗೆಳೆಯರು ಎಂದರೆ ಸರಿ. ನಾನು ಸದರಿಯವರು ನನ್ನ ಗೆಳೆಯ ಆಗಿರುವ ಕಾರಣ ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.